# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಮತ್ತಿಕೆರೆ ಉಪ ವಿಭಾಗ, ನೇತಾಜಿ ವೃತ್ತ, ಮತ್ತಿಕೆರೆ, ಬೆಂಗಳೂರು-560 054,

ಸಂಖ್ಯೆ:ಸ.ಕಾ.ನಿ.ಅ(ಎಂ.ಕೆ)/ಜಿ.ಎಲ್/07 /20-21 ದಿನಾಂಕ:02-01-2021

## ವಾರ್ಡ್ 45ರ ವಾರ್ಡ್ ಸಭೆಯ ನಡವಳಿಗಳು

ದಿನಾಂಕ:02-01-2021 ರಂದು ಮತ್ತಿಕೆರೆ ಉಪವಿಭಾಗ, ವಾರ್ಡ್ ಸಂಖ್ಯೆ:45ರ ಸುಬೇದಾರ್‌ಪಾಳ್ಯ, ಸರ್ಕಾರಿ ಪ್ರೌಢ ಶಾಲೆ, (ಪ್ರಾಥಮಿಕ ಆರೋಗ್ಯ ಕೇಂದ್ರ) ಹತ್ತಿರ ಶ್ರೀ ಜೆ.ಮಂಜುನಾಥ, ಭಾ.ಆ.ಸೇ ವಿಶೇಷ ಆಯುಕ್ತರು (ಆಡಳಿತ), ಬೃ.ಬೆಂ.ಮ.ಪಾ., ನೊಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು:

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ /ಇಲಾಖೆ | ಹಾಜರಾತಿ | ಮೊಬೈಲ್ ಸಂಖ್ಯೆ |
|---|---|---|---|---|
| 1 | ಶ್ರೀಮತಿ ಡಾ॥ ಸವಿತ | ಆರೋಗ್ಯ ಅಧಿಕಾರಿ, ಮಲ್ಲೇಶ್ವರಂ | ಹಾಜರಿದ್ದರು | 9886620365 |
| 2 | ಶ್ರೀಮತಿ ಶಿಲ್ಪ | ಕಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲೇಶ್ವರಂ | ಹಾಜರಿದ್ದರು | 9886030356 |
| 3 | ಶ್ರೀ ಎಸ್ ಪ್ರಭಾಕರ್ | ಹಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲೇಶ್ವರಂ | ಹಾಜರಿದ್ದರು | 9740773600 |
| 4 | ಶ್ರೀ ಎಂ. ಮೂರ್ತಿ | ಆರ್.ಎಫ್.ಓ. (ಅರಣ್ಯ ಇಲಾಖೆ) | ಹಾಜರಿದ್ದರು | 9448831944 |
| 5 | ಶ್ರೀ ಶಿವರಾಮು | ಆರ್.ಎಫ್.ಓ. (ಅರಣ್ಯ ಇಲಾಖೆ) | ಹಾಜರಿದ್ದರು | 9480683341 |
| 6 | ಅನಿಲ್ ಕುಮಾರ್ ಎಂ | ಬೆಸ್ಕಾಂ (ಯಶವಂತಪುರ) | ಹಾಜರಿದ್ದರು | 9449864543 |
| 7 | ಶ್ರೀ ಮೊಹಮ್ಮದ್ ಗೀಸುದ್ದಿನ್ | ಕೆಲಸ ಪರಿವೀಕ್ಷಕರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಹಾಜರಿದ್ದರು | 9880208594 |
| 9 | ಅಜಾದ್ ಪಾಷ | ಸ್ಟ್ರೀಟ್ ಲೈಟ್, ಇಂಜಿನೀಯರ್ | ಹಾಜರಿದ್ದರು | 9141395491 |
| 10 | ಮೋಹನ್ ರಾಜು ಕೆ | ಸ್ಟ್ರೀಟ್ ಲೈಟ್, ಗುತ್ತಿಗೆದಾರರು | ಹಾಜರಿದ್ದರು | 8310516657 |



Scanned with CamScanner

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಹಾಜರಿದ್ದ ಅಧಿಕಾರಿಗಳ/ ಸದಸ್ಯರುಗಳ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಡೆಬ್ರೀಸ್ ಸುರಿದಿರುವುದು ಕಂಡುಬಂದಿರುತ್ತದೆ ಎಂದು ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ ಇಲಾಖೆಯ ಅಧಿಕಾರಿಗಳು ನೋಟಿಸ್ ಜಾರಿ ಮಾಡಲು ತಿಳಿಸಿ ಹಾಗೂ ಬಿ.ಬಿ.ಎಂ.ಪಿ. ಮೊಬೈಲ್ ಮಾರ್ಷಲ್‌ಗಳು ಈ ಬಗ್ಗೆ ಗಮನಿಸುವಂತೆ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ಅಧ್ಯಕ್ಷರು, ತಿಳಿಸಿದರು.

2. ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ಖಾಲಿ ಇರುವ ಸ್ವತ್ತುಗಳಲ್ಲಿ ಕಸವನ್ನು ಸುರಿಯುತ್ತಿರುವುದು ಕಂಡುಬಂದಿರುತ್ತದೆ ಎಂದು ಶ್ರೀ ರವಿ ಆಚಾರ್ಯ ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಯ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು, ಸೂಚಿಸಿದರು.

3. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ 18ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆಯಲ್ಲಿರುವ ಕನ್ಸರ್‌ವೆನ್ಸಿ ರಸ್ತೆಗೆ ಬೇಲಿ ಹಾಕಿಕೊಂಡಿರುವುದು ಕಂಡುಬಂದಿರುತ್ತದೆ ಎಂದು ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಅಧ್ಯಕ್ಷರು, ತಿಳಿಸಿದರು.

4. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ 15ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆಯಲ್ಲಿ ಮರದ ರೆಂಬೆ ಕೊಂಬೆಗಳನ್ನು ನೇತಾಡುತ್ತಿರುವುದು ಕಂಡುಬಂದಿರುತ್ತದೆ ಎಂದು ನವೀನ ಶ್ರೀಧರ್, ಸದಸ್ಯರು, (MSI) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ, ಅಧ್ಯಕ್ಷರು, ಸೂಚಿಸಿದರು.

5. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ ವಾರ್ಡ್ ಕಮಿಟಿ ಸಭೆಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಹಾಜರಾಗದೇ ಇರುವ ಬಗ್ಗೆ ನವೀನ ಶ್ರೀಧರ್, ಸದಸ್ಯರು, (MSI) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಅಧ್ಯಕ್ಷರು, ಸಭೆಗೆ ತಿಳಿಸಿದರು.

6. ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ರಸ್ತೆಯಲ್ಲಿ ನೇತಾಡುತ್ತಿರುವ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಟ್ರೀ ಕ್ಯಾನೋಪಿ ಮ್ಯಾನೇಜ್‌ಮೆಂಟ್ ರವರನ್ನು ಬಳಸಿಕೊಳ್ಳುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ, ಅಧ್ಯಕ್ಷರು, ಸಭೆಗೆ ತಿಳಿಸಿದರು.

7. ಮಲ್ಲೇಶ್ವರಂ ವ್ಯಾಪ್ತಿಯಲ್ಲಿರುವ ಬೀದಿ ದೀಪಗಳ ನಿರ್ವಹಣೆ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಂಬಂದಪಟ್ಟ ಬೀದಿ ದೀಪಗಳ ಇಂಜಿನೀಯರ್ ರವರು ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ದೀವಾನರಪಾಳ್ಯದಲ್ಲಿರುವ ದಾರಿ ಆಂಜನೇಯ ಸ್ವಾಮಿ ಬೀದಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಲಾಗಿದ್ದು, ಮೇಲ್ಸೇತುವೆ ಮೇಲೆ 4 ಪೋಲ್‌ಗಳನ್ನು ಅಳವಡಿಸಬೇಕು ಹಾಗೂ ಯಶವಂತಪುರ ಸರ್ಕಲ್‌ನಲ್ಲಿ 22 ಪೋಲ್‌ಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು.



Scanned with CamScanner

8. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ಕಸ ವಿಂಗಡನೆ ಕಾರ್ಯವು ಸಮರ್ಪಕವಾಗಿ ನಡೆಯುತ್ತಿರುವುದಿಲ್ಲ ಎಂದು ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ **ಶ್ರೀಮತಿ ಶಿಲ್ಪಾ, ಕಿರಿಯ ಆರೋಗ್ಯಾ ಪರಿವೀಕ್ಷಕರಿಗೆ ಅಧ್ಯಕ್ಷರು, ಸಭೆಯಲ್ಲಿ ತಿಳಿಸಿದರು.**

9. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ಮೈಸೂರು ಲ್ಯಾಂಪ್ಸ್ ರಸ್ತೆಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯ ಕಛೇರಿಯನ್ನು ಸ್ಥಳಾಂತರಿಸಲಾಗಿದ್ದು, ಪ್ರಸ್ತುತ ಸದರಿ ಕಟ್ಟಡ ಖಾಲಿ ಇದ್ದು, ಇಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿರುತ್ತದೆ ಎಂದು ಅಪರ್ಣಾ ಹಾಗೂ ರವಿ ಆಚಾರ್ಯ, ಸದಸ್ಯರುಗಳು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ಸದರಿ ಕಟ್ಟಡವನ್ನು ಸಧ್ಯದಲ್ಲಿಯೇ ಬಿ.ಬಿ.ಎಂ.ಪಿ. ಗೆ ವ್ಯಾಪ್ತಿಗೆ ಹಸ್ತಾಂತರಿಸಲಾಗುವುದು ಎಂದು ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ) ರವರಿಗೆ ತಿಳಿಸಿದರು.

10. ವಾರ್ಡ್ ಸಂಖ್ಯೆ: 45, ಮಲ್ಲೇಶ್ವರಂ ವ್ಯಾಪ್ತಿಯಲ್ಲಿ **ಡಾ|| ಸವಿತಾ, ಸಾರ್ವಜನಿಕರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು** ಕೋವಿಡ್ ವ್ಯಾಕ್ಸಿನೇಷನ್ ಬಗ್ಗೆ ಸಭೆಗೆ ವಿವರಿಸುತ್ತಾ, ಪ್ರಸ್ತುತ ವ್ಯಾಕ್ಸಿನೇಷನ್ ಡ್ರೈರನ್ ನಡೆಯುತ್ತಿರುತ್ತದೆ. ಹಾಗೂ ನಾಗಪ್ಪ ಬ್ಲಾಕ್, ಕೊಲಂಬಿಯಾ ಏಷ್ಯಾ, ಎಂ.ಎಸ್.ರಾಮಯ್ಯ ಆಸ್ಪತ್ರೆ, ದೀವಾನರ ಪಾಳ್ಯ ಪ್ರಾಥಮಿಕ ಕೇಂದ್ರ, ವ್ಯಾಕ್ಸಿನೇಷನ್‌ಗಾಗಿ ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಹಾಗೂ ಶಾಲೆಗಳು ಪ್ರಾರಂಭವಾಗಿದ್ದು, ಶಾಲೆಗಳಿಗೆ ಭೇಟಿ ನೀಡಿ ಕೋವಿಡ್-19 ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸದರಿ ಸಭೆಗೆ ಹಾಜರಾಗದೇ ಇರುವ ಇಲಾಖಾ ಅಧಿಕಾರಿಗಳಿಗೆ ಮುಂದಿನ ಸಭೆಗೆ ಹಾಜರಾಗುವಂತೆ ನೋಟಿಸ್ ನೀಡಲು ತಿಳಿಸಿ, ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ, ಬಗೆಹರಿಸಲು ಕ್ರಮ ಕೈಗೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

(ಎಂ.ನಾಗರಾಜ),
ಸದಸ್ಯ ಕಾರ್ಯಾದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ.

(ಜೆ.ಮಂಜುನಾಥ).
ವಾರ್ಡ್ ಕಮಿಟಿ ಅಧ್ಯಕ್ಷರು,
ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ.

Scanned with CamScanner